**ಕರ್ನಾಟಕ ಸರ್ಕಾರ**

ಕ್ರಮಾಂಕ: ಇಡಿ 67 ಯುಜಿವಿ 2015

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 27-05-2015.

**ಇಂದ:**
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು – 560 001.

**ಇವರಿಗೆ:**
ಕುಲಸಚಿವರು,
ಗುಲ್ಬರ್ಗ ವಿಶ್ವವಿದ್ಯಾಲಯ,
**ಗುಲ್ಬರ್ಗ– 585 106.**

ಮಾನ್ಯರೆ,

ವಿಷಯ:– **2015–16ನೇ ಶೈಕ್ಷಣಿಕ ಸಾಲಿಗೆ ಸುರಪುರ ತಾಲ್ಲೂಕಿನ ರಂಗಂಪೇಟೆಯ ಜ್ಞಾನಜ್ಯೋತಿ ಎಜುಕೇಷನ್ ಅಂಡ್ ರೂರಲ್ ಡೆವಲಪ್‌ಮೆಂಟ್ ಟ್ರಸ್ಟ್‌ನವರು ಸುರಪುರ ತಾಲ್ಲೂಕಿನ ಕಕ್ಕೇರದಲ್ಲಿ ಹೊಸದಾಗಿ ಪ್ರಾರಂಭಿಸಲಿರುವ ಶ್ರೀ ಸೋಮನಾಥೇಶ್ವರ ಪದವಿ ಮಹಾವಿದ್ಯಾಲಯಕ್ಕೆ ಸಂಯೋಜನೆ ನೀಡುವ ಬಗ್ಗೆ.**

ಉಲ್ಲೇಖ:– **ತಮ್ಮ ಪತ್ರ ಸಂಖ್ಯೆ: ಗುವಿಗು/ವಿಮವಿ/ಸಂಲಗ್ನತೆ/2014–15/8257, ದಿನಾಂಕ 25–03–2015.**

---

**2015–16ನೇ ಶೈಕ್ಷಣಿಕ ಸಾಲಿನಿಂದ ಸುರಪುರ ತಾಲ್ಲೂಕಿನ ರಂಗಂಪೇಟೆಯ ಜ್ಞಾನಜ್ಯೋತಿ ಎಜುಕೇಷನ್ ಅಂಡ್ ರೂರಲ್ ಡೆವಲಪ್‌ಮೆಂಟ್ ಟ್ರಸ್ಟ್‌ನವರು ಸುರಪುರ ತಾಲ್ಲೂಕಿನ ಕಕ್ಕೇರದಲ್ಲಿ ಹೊಸದಾಗಿ ಪ್ರಾರಂಭಿಸಲಿರುವ ಶ್ರೀ ಸೋಮನಾಥೇಶ್ವರ ಪದವಿ ಮಹಾವಿದ್ಯಾಲಯವನ್ನು** ಬಿ.ಎ., ಮತ್ತು ಬಿ.ಕಾಂ., **ಕೋರ್ಸುಗಳೊಂದಿಗೆ** ಪ್ರಾರಂಭಿಸಲು ಸಂಯೋಜನೆ ಕೋರಿ ಗುಲ್ಬರ್ಗ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಅರ್ಜಿಯನ್ನು ಗುಲ್ಬರ್ಗ ವಿಶ್ವವಿದ್ಯಾಲಯದ ಸ್ಥಳೀಯ ವಿಚಾರಣಾ ಸಮಿತಿಯ ವರದಿ ಮತ್ತು ವಿದ್ಯಾವಿಷಯಕ ಪರಿಷತ್‌ನ ಸಮಾಲೋಚನೆಯೊಂದಿಗೆ ಸಿಂಡಿಕೇಟ್ ಮಾಡಿರುವ ಶಿಫಾರಸ್ಸನ್ನು ಆಧರಿಸಿ ಸಂವೀಕ್ಷಿಸಲಾಗಿದೆ.

2) ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ 59ನೇ ಪ್ರಕರಣದ (11)ನೇ ಉಪಪ್ರಕರಣದಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಮೇಲ್ಕಂಡ ಕಾಲೇಜನ್ನು ಕೆಳಕಂಡ ಪದವಿ ಕೋರ್ಸುಗಳು ಮತ್ತು ಕೆಳಗೆ ನಿಗದಿಪಡಿಸಿರುವ ವಿಷಯ ಸಮೂಹ ಮತ್ತು ವಿದ್ಯಾರ್ಥಿ ಪ್ರಮಾಣದೊಂದಿಗೆ 2015–16ನೇ ಶೈಕ್ಷಣಿಕ ಸಾಲಿನಿಂದ ಪ್ರಾರಂಭಿಸಲು ಸಂಯೋಜನೆಯನ್ನು ಮಂಜೂರು ಮಾಡುವಂತೆ ಸರ್ಕಾರದ ಶಿಫಾರಸ್ಸನ್ನು ತಿಳಿಸಲು ನಾನು ನಿರ್ದೇಶಿತನಾಗಿದ್ದೇನೆ.

| ಕ್ರ.ಸಂ. | ಕೋರ್ಸು | ಭಾಷೆಗಳು/ವಿಷಯಗಳು | ವಿದ್ಯಾರ್ಥಿ ಪ್ರಮಾಣ |
|---|---|---|---|
| 1 | ಬಿ.ಎ., | **ಭಾಷೆಗಳು:**<br>ಕನ್ನಡ, ಇಂಗ್ಲೀಷ್, ಹಿಂದಿ, ಉರ್ದು<br>**ಐಚ್ಛಿಕ ವಿಷಯಗಳು:**<br>ಇತಿಹಾಸ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ಅರ್ಥಶಾಸ್ತ್ರ, ಗ್ರಾಮೀಣಾಭಿವೃದ್ಧಿ, ಕಂಪ್ಯೂಟರ್ ಅಪ್ಲಿಕೇಷನ್, ಐಚ್ಛಿಕ ಕನ್ನಡ ಐಚ್ಛಿಕ ಇಂಗ್ಲೀಷ್ | 60 |
| 2 | ಬಿ.ಕಾಂ., | **ಭಾಷೆಗಳು:**<br>ಕನ್ನಡ, ಇಂಗ್ಲೀಷ್, ಹಿಂದಿ, ಉರ್ದು<br>**ಐಚ್ಛಿಕ ವಿಷಯಗಳು:**<br>ವಿಶ್ವವಿದ್ಯಾಲಯದ ಪರಿನಿಯಮಾವಳಿಯಂತೆ | 30 |

**ಷರತ್ತುಗಳು:–**

1) ಕಾಲೇಜುಗಳಿಗೆ ಅನ್ವಯವಾಗುವ ಅನುದಾನ ಸಂಹಿತೆಯಲ್ಲಿ ಯಾವುದೇ ಉಪಬಂಧಗಳಿದ್ದರೂ ಕಾಲೇಜಿನ ಮೇಲ್ಕಂಡ ಕೋರ್ಸುಗಳಿಗೆ ಸರ್ಕಾರವು ಯಾವುದೇ ಅನುದಾನವನ್ನು ಮಂಜೂರು ಮಾಡುವುದಿಲ್ಲ. ಅವುಗಳನ್ನು ಶಾಶ್ವತ ಅನುದಾನರಹಿತ ಕೋರ್ಸುಗಳೆಂದು ಪರಿಗಣಿಸತಕ್ಕದ್ದು ಹಾಗೂ ಈ ಕುರಿತು ಸರ್ಕಾರಕ್ಕೆ ಒಪ್ಪಂದದ ಪತ್ರವನ್ನು ಸಲ್ಲಿಸತಕ್ಕದ್ದು.

2) ಮೇಲ್ಕಂಡ ಕಾಲೇಜು ವಿಶ್ವವಿದ್ಯಾಲಯದ ನಿಯಮಾವಳಿಗಳ ಉಪಬಂಧಗಳನ್ನು ತಪ್ಪದೇ ಪಾಲಿಸತಕ್ಕದ್ದು;

3) ನಿಗದಿತ ವಿದ್ಯಾರ್ಥಿ ಪ್ರಮಾಣಕ್ಕಿಂತ ಹೆಚ್ಚುವರಿಯಾಗಿ ವಿದ್ಯಾರ್ಥಿಗಳ ಪ್ರವೇಶ ಮಾಡತಕ್ಕದ್ದಲ್ಲ;

4) ಜಾರಿಯಲ್ಲಿರುವ ಸರ್ಕಾರದ ನಿಯಮಾವಳಿ, ಆದೇಶಗಳು ಹಾಗೂ ವಿಶ್ವವಿದ್ಯಾಲಯದ ಅನುಶಾಸನ, ಪರಿನಿಯಮಾವಳಿ ಇತ್ಯಾದಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು;

5) ಸ್ಥಳೀಯ ವಿಚಾರಣಾ ಸಮಿತಿ ವಿಧಿಸಿರುವ ಪ್ರತಿಯೊಂದು ಷರತ್ತನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.

6) ಕಾಲೇಜು/ಆಡಳಿತ ಮಂಡಳಿಯು ಶೇ.50 ರಷ್ಟು ವಿಶ್ವವಿದ್ಯಾಲಯ ಕೋಟಾವನ್ನು (ಎಲ್ಲಿ ಅನ್ವಯವಾಗುತ್ತದೆಯೋ ಅಲ್ಲಿ) ವಿಶ್ವವಿದ್ಯಾಲಯದ ನಿಯಮಾವಳಿಯ ಪ್ರಕಾರ ನಿಗದಿಪಡಿಸತಕ್ಕದ್ದು; ಮತ್ತು ಕಾಲಕಾಲಕ್ಕೆ ವಿಶ್ವವಿದ್ಯಾಲಯವು ನಿಗದಿಪಡಿಸುವ ಶುಲ್ಕವನ್ನು ಮಾತ್ರ ವಸೂಲು ಮಾಡತಕ್ಕದ್ದು, ವಿಶ್ವವಿದ್ಯಾಲಯವು ನಿಗದಿಪಡಿಸಿದ ಶುಲ್ಕ/ಮೊತ್ತಕ್ಕಿಂತ ಬೇರೆ ಹೆಚ್ಚಿನ ಮೊತ್ತವನ್ನು ವಸೂಲು ಮಾಡತಕ್ಕದ್ದಲ್ಲ.

7) ದಿನಾಂಕ: 13-8-1997 ರಂದು ವಿಶಾಖ V/S ರಾಜಸ್ತಾನ ಸರ್ಕಾರ ಮೊಕದ್ದಮ್ಮೆಯಲ್ಲಿ ಸುಪ್ರೀಂ ಕೋರ್ಟು ನೀಡಿರುವ ತೀರ್ಪಿನನುಸಾರ ಯಾವುದೇ ವ್ಯಕ್ತಿ/ವಿದ್ಯಾರ್ಥಿಯು ಗಲಭೆಯನ್ನು ಉಂಟು ಮಾಡುವುದಾಗಲೀ ಅಥವಾ ಕಾಲೇಜಿನಲ್ಲಿ ಮಹಿಳೆಯರ ಮೇಲೆ ಲೈಂಗಿಕ ಕಿರುಕುಳ ನೀಡಿದಲ್ಲಿ ಅದು

ಸಂಜ್ಞೇಯ ಅಪರಾಧ (Cognizable Offence) ಎಂದು ಪರಿಗಣಿಸಿ, ಈ ತರಹದ ಚಟುವಟಿಕೆಗಳಲ್ಲಿ ತೊಡಗಿದ ವಿದ್ಯಾರ್ಥಿ/ ವ್ಯಕ್ತಿಯ ಪ್ರವೇಶವನ್ನು ರದ್ದುಪಡಿಸುವುದು; ಮತ್ತು ಆ ವ್ಯಕ್ತಿ/ವಿದ್ಯಾರ್ಥಿಯ ಮೇಲೆ ಕಾನೂನು ರೀತ್ಯಾ ಕ್ರಮ ಜರುಗಿಸತಕ್ಕದ್ದು; ಮುಂದುವರೆದು, ಕಾಲೇಜು/ಆಡಳಿತ ಮಂಡಳಿಯು ಸುಪ್ರೀಂ ಕೋರ್ಟಿನ ಆದೇಶದನ್ವಯ ಒಂದು ದೂರು ಸಮಿತಿಯನ್ನು ರಚಿಸಿ; ಇಂತಹ ಚಟುವಟಿಕೆಗಳನ್ನು ನಿಯಂತ್ರಿಸಲು ಕ್ರಮ ಜರುಗಿಸತಕ್ಕದ್ದು;

8) ಕಾಲೇಜು ವಿದ್ಯಾರ್ಥಿಗಳ ಬೆಳವಣಿಗೆಗಾಗಿ ಉತ್ತಮ ಕೋರ್ಸನ್ನು ನಡೆಸತಕ್ಕದ್ದು; ಕಾಲೇಜಿನ ಪ್ರಾಂಶುಪಾಲರು/ ಆಡಳಿತ ಮಂಡಲಿಯು ವಿದ್ಯಾರ್ಥಿ/ಬೋಧಕ ವೃಂದವನ್ನು ಸೌಹಾರ್ದಯುತವಾಗಿ ಕಾಣತಕ್ಕದ್ದು.

9) ಕಾಲೇಜಿನ ಆಡಳಿತ ಮಂಡಳಿಯ ಯಾವುದೇ ವಿದ್ಯಾರ್ಥಿಯ ಅಂಕಪಟ್ಟಿ ಅಥವಾ ಇತರೆ ದಾಖಲಾತಿಗಳನ್ನು ಸದರಿ ವಿದ್ಯಾರ್ಥಿಯ ಪ್ರವೇಶವನ್ನು ವಿಶ್ವವಿದ್ಯಾಲಯವು ಅನುಮೋದಿಸುವವರೆಗೆ ಅಥವಾ 6 ತಿಂಗಳ ಅವಧಿಗೆ ಮೀರಿ, ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಅನಗತ್ಯವಾಗಿ ತಡೆಹಿಡಿಯತಕ್ಕದ್ದಲ್ಲ;

10) ಕಾಲೇಜಿನ ಆಡಳಿತ ಮಂಡಳಿಯ ಯಾವುದೇ ವಿದ್ಯಾರ್ಥಿಯು ವರ್ಗಾವಣೆ ಪ್ರಮಾಣ ಪತ್ರ ಬೇಕೆಂದು ಅಪೇಕ್ಷಿಸಿ ಅರ್ಜಿ ಸಲ್ಲಿಸಿದಲ್ಲಿ, ಅದನ್ನು ವಿತರಿಸುವಾಗ ವಿದ್ಯಾರ್ಥಿಗೆ ತೊಂದರೆ ನೀಡತಕ್ಕದ್ದಲ್ಲ; ಹಾಗೂ ಅವರಿಂದ ಬಾಕಿ ಉಳಿದಿರುವ ಶೈಕ್ಷಣಿಕ ವರ್ಷ/ಸೆಮಿಸ್ಟರ್ ಅವಧಿಗೆ ಮಾತ್ರ ಬೋಧಕ ಶುಲ್ಕವನ್ನು ಪಡೆಯತಕ್ಕದ್ದು ಹಾಗೂ ಬೇರೆ ಯಾವುದೇ ಮೊತ್ತವನ್ನು ಪಡೆಯತಕ್ಕದ್ದಲ್ಲ.

11) ಕ್ಯಾಪಿಟೇಷನ್ ಶುಲ್ಕವನ್ನು ಯಾವುದೇ ರೂಪದಲ್ಲೂ ಪಡೆಯತಕ್ಕದ್ದಲ್ಲ.

12) ಪ್ರವೇಶಾತಿಯಲ್ಲಿ ರೋಸ್ಟರ್ ಪದ್ಧತಿಯನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

13) ಆಡಳಿತ ವ್ಯವಹಾರದಲ್ಲಿ ಕನ್ನಡವನ್ನು ಕಡ್ಡಾಯವಾಗಿ ಬಳಸತಕ್ಕದ್ದು

ತಮ್ಮ ನಂಬುಗೆಯ,

(ಸಂಧ್ಯಾ ಎಲ್. ನಾಯಕ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯಗಳು)

ಪ್ರತಿ:-

1. ಕಾಲೇಜು ಶಿಕ್ಷಣ ಆಯುಕ್ತರು/ನಿರ್ದೇಶಕರು, ಬೆಂಗಳೂರು - 560 001.
2. ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಗುಲ್ಬರ್ಗ.
3. ಕಾರ್ಯದರ್ಶಿಗಳು, ಜ್ಞಾನಜ್ಯೋತಿ ಎಜುಕೇಷನ್ ಅಂಡ್ ರೂರಲ್ ಡೆವಲಪ್‌ಮೆಂಟ್ ಟ್ರಸ್ಟ್, ರಂಗಂಪೇಟೆ, ಸುರಪುರ ತಾಲ್ಲೂಕು, ಯಾದಗಿರಿ ಜಿಲ್ಲೆ.
4. ಪ್ರಾಂಶುಪಾಲರು, ಶ್ರೀ ಸೋಮನಾಥೇಶ್ವರ ಪದವಿ ಮಹಾವಿದ್ಯಾಲಯ, ಕಕ್ಕೇರ, ಸುರಪುರ ತಾಲ್ಲೂಕು, ಯಾದಗಿರಿ ಜಿಲ್ಲೆ.